# ಫಾತಿಮಾ ಶೇಖ್

ಜ್ಯೋತಿಬಾ ಫುಲೆ ಹಾಗೂ ಸಾವಿತ್ರಿಬಾಯಿ ಫುಲೆಯವರ ಜೊತೆಯಲ್ಲಿ ಹೆಜ್ಜೆಹಾಕಿದ ಮೊದಲ ಮುಸ್ಲಿಂ ಮಹಿಳೆ ಫಾತಿಮಾ ಶೇಖ್. ಅಕ್ಷರ ಕಲಿಸುವ, ಶಾಲೆಗಳನ್ನು ಸ್ಥಾಪಿಸುವ ಮೂಲಕ ಹೋರಾಟದ ಕಿಡಿಯನ್ನು ಹೊತ್ತಿಸಿದ ಜ್ಯೋತಿಬಾ ಫುಲೆಯವರು ಸಾಮಾಜಿಕ ಕ್ರಾಂತಿಯ ಹರಿಕಾರರಾಗಿದ್ದರು. ಫುಲೆಯವರು ಪತ್ನಿಯನ್ನು ಕ್ರಾಂತಿಯ ಪಥದಲ್ಲಿ ಒಟ್ಟೊಟ್ಟಿಗೆ ಹೆಜ್ಜೆ ಹಾಕುವಂತೆ ಮಾಡಿದರು. ಸಾಂಸಾರಿಕ ಜೀವನಕ್ಕಿಂತ ನೊಂದವರ ಬಾಳಿನ ಬೆಳಕಾಗುವಂತೆ ನೋಡಿಕೊಂಡರು.

ದಂಪತಿಯ ಸಮಾಜ ಸುಧಾರಣಾ ಕೆಲಸದ ಬಗ್ಗೆ ಜ್ಯೋತಿಬಾ ಅವರ ತಂದೆ ಗೋವಿಂದರಾವ್ ಅವರಿಗೆ ಅಭಿಮಾನವಿತ್ತು. ಮನು ನಿರ್ಮಿತ ಕಟ್ಟಲೆಗಳನ್ನು ಮಹಿಳೆಯರೇ ಮುರಿಯಬೇಕೆಂಬುದು ಜ್ಯೋತಿಬಾ ಅವರ ನಿಲುವಾಗಿತ್ತು. 'ನ ಸ್ತ್ರೀ ಸ್ವಾತಂತ್ರ್ಯಮ್ ಅರ್ಹತಿ' ಎಂಬ ಮಾತುಗಳನ್ನು ಹಿಂದೆ ತಳ್ಳಬೇಕೆಂದರೆ ಮಹಿಳೆಯರು ವಿದ್ಯಾವಂತರಾಗಬೇಕು ಎಂದು ಮನಗಂಡಿದ್ದರು. ತಾವು ಸ್ಥಾಪಿಸಿದ್ದ ಹೆಣ್ಣುಮಕ್ಕಳ ಶಾಲೆಯಲ್ಲಿ ತನ್ನ ಹೆಂಡತಿ ಮತ್ತು ಅತ್ತೆ ಸಗುಣಾಬಾಯಿಯನ್ನು ಮೊದಲು ಸೇರಿಸುತ್ತಾರೆ.

ಈ ಸಂಗತಿ ಸಮಾಜವನ್ನು ಮೌಢ್ಯ ಹರಡುವ ಮೂಲಕ ನಿಯಂತ್ರಿಸುತ್ತಿದ್ದ ಜಾತಿಯವರನ್ನು ಕೆರಳಿಸುತ್ತದೆ. ಈ ಶೈಕ್ಷಣಿಕ ಕ್ರಾಂತಿ ತಮ್ಮ ಮನೆಯನ್ನು ಸುಡುತ್ತಿದೆ ಎನಿಸಿದಾಗ ಗೋವಿಂದರಾವ್ ಮಗನನ್ನು ಮನೆ ತೊರೆಯುವಂತೆ ಅಜ್ಞಾಪಿಸುತ್ತಾರೆ. ಕುಟುಂಬದಿಂದ ಹೊರಬಂದ ದಂಪತಿಗೆ ಆಶ್ರಯ ಕೊಟ್ಟು ಬ್ರಾಹ್ಮಣ ಸಮಾಜದ ಕೆಂಗಣ್ಣಿಗೆ ಗುರಿಯಾಗಲು ಯಾರೂ ಸಿದ್ಧರಿರಲಿಲ್ಲ. ಆಗ ಅವರ ಸಹಾಯಕ್ಕೆ ಬಂದವರು ಅವರ ಸ್ನೇಹಿತರಾಗಿದ್ದ ಉಸ್ಮಾನ್ ಖಾನ್. ಅವರು ತಮ್ಮ ಮನೆಗೆ ಫುಲೆ ದಂಪತಿಗಳನ್ನು ಕರೆದೊಯ್ದು ಆಶ್ರಯಕೊಟ್ಟರು. ಮುಂದೆ ಅವರ ಮನೆಯಲ್ಲೇ ದಲಿತ ವಯಸ್ಕರ ಶಿಕ್ಷಣ ಶಾಲೆ ಆರಂಭವಾಗುತ್ತದೆ. ಉಸ್ಮಾನ್ ಖಾನ್ ಅವರ ತಂಗಿಯೇ ಫಾತಿಮಾ ಶೇಖ್. ಈಕೆ ಫುಲೆಯವರ ಶಾಲೆಯಲ್ಲಿ ಮರಾಠಿ ಕಲಿಯುತ್ತಾಳೆ. ಅದು ಹೆಣ್ಣುಮಕ್ಕಳ ಶಾಲೆಯಾದ್ದರಿಂದ ಅಲ್ಲಿ ಶಿಕ್ಷಕರಾಗಿ ಕೆಲಸ ಮಾಡಲು ಗಂಡಸರು ಮುಂದೆ ಬರದಿದ್ದಾಗ ಸಮಸ್ಯೆ ಉಂಟಾಗುತ್ತದೆ. ಈ ಸಮಸ್ಯೆ ಪರಿಹರಿಸಲು ಜ್ಯೋತಿಬಾ ಹೆಣ್ಣುಮಕ್ಕಳಿಗೆ ಶಿಕ್ಷಕ ತರಬೇತಿ ಕೊಡಲೆಂದೇ 'ನ್ಯಾಚುರಲ್ ಸ್ಕೂಲ್' ಎಂಬ ಶಿಕ್ಷಕ ತರಬೇತಿ ಶಾಲೆಯನ್ನು ತೆರೆಯುತ್ತಾರೆ. ಅಲ್ಲಿ ಸಾವಿತ್ರಿಬಾಯಿ, ಫಾತಿಮಾಶೇಖ್ ಶಿಕ್ಷಕ ತರಬೇತಿಗೆ ಸೇರುತ್ತಾರೆ. ಸ್ವತಃ ಜ್ಯೋತಿಬಾ ಅವರೇ ತರಬೇತಿ ನೀಡುತ್ತಾರೆ. ಈ ಇಬ್ಬರೂ ಅದೇ ಶಾಲೆಯಲ್ಲಿ ಶಿಕ್ಷಕರಾಗಿ ಹಲವರಿಗೆ ಬೆಳಕನ್ನು ನೀಡುವ ಕೆಲಸ ಮಾಡುತ್ತಾರೆ. ಮುಂದೆ ಅವರು ಪೂರ್ಣಪ್ರಮಾಣದ ಶಿಕ್ಷಕ ತರಬೇತಿಯನ್ನು ಅಹ್ಮದ್ ನಗರದ 'ಮೇಡಂ ಸಿಂಥಿಯಾ ಫೆರಾರೆ ಮಿಷನರಿ ಪಾಠಶಾಲೆ'ಯಲ್ಲಿ ಪಡೆಯುತ್ತಾರೆ. ಹೀಗೆ ಶಿಕ್ಷಕ ತರಬೇತಿಯ ಪ್ರಮಾಣಪತ್ರವನ್ನು ಪಡೆದ ಇವರಿಬ್ಬರು ಫುಲೆಯವರ ಪಾಠಶಾಲೆಯಲ್ಲಿ ಶಿಕ್ಷಕರಾಗಿ ವೃತ್ತಿ ಆರಂಭಿಸುತ್ತಾರೆ. ಫಾತಿಮಾ ಶೇಖ್ ಮೊದಲ ಮುಸ್ಲಿಂ ಶಿಕ್ಷಕಿ ಎನ್ನುವ ದಾಖಲೆ ಸೃಷ್ಟಿಸುತ್ತಾರೆ. ಸಾವಿತ್ರಿಬಾಯಿ ಭಾರತದ ಮೊದಲ ಶಿಕ್ಷಕಿಯಾಗಿ 'ಅಕ್ಷರದ ಅವ್ವ' ಎಂದು ಕರೆಸಿಕೊಳ್ಳುತ್ತಾರೆ.

ಹಲವು ಶಾಲೆಗಳನ್ನು ತೆರೆದ ಜ್ಯೋತಿಬಾ ಆರ್ಥಿಕವಾಗಿ ಕಷ್ಟದಲ್ಲಿದ್ದ ಸಂದರ್ಭವದು. ಶಿಕ್ಷಕರಿಗೆ ಸಂಬಳ ಕೊಡದ ಪರಿಸ್ಥಿತಿ ಉಂಟಾಗುತ್ತದೆ. ಆಗ ಈ ಇಬ್ಬರೂ ಶಿಕ್ಷಕಿಯರು ನಿಸ್ವಾರ್ಥ ಮನೋಭಾವನೆಯಿಂದ ಸೇವೆ ಸಲ್ಲಿಸುತ್ತಾರೆ. ಕೆಳವರ್ಗದವರು, ಹೆಣ್ಣುಮಕ್ಕಳು ವಿದ್ಯೆ ಪಡೆಯುವುದರಿಂದ ಕೇಡಾಗುತ್ತದೆಂದು ವೈದಿಕಶಾಹಿ ವ್ಯವಸ್ಥೆ ಹರಿಹಾಯುತ್ತದೆ. ಶಿಕ್ಷಕಿಯರನ್ನು ಅಪಮಾನಿಸುವ ಕೇಡಿನ ಕೆಲಸಗಳೂ ನಡೆಯುತ್ತವೆ. ಇದರಿಂದ ಫುಲೆ ದಂಪತಿ, ಫಾತಿಮಾ ಶೇಖ್ ಅವರು ಧೈರ್ಯ ಕಳೆದುಕೊಳ್ಳಲಿಲ್ಲ. ಅದರಲ್ಲೂ ರಿವಾಜುಗಳ ಒಳಗೆ ಬಂಧಿಯಾಗಿದ್ದ ಮುಸ್ಲಿಂ ಸಮುದಾಯದ ಫಾತಿಮಾ ಶೇಖ್ ಆಗಲಿ, ಅವಳ ಅಣ್ಣ ಉಸ್ಮಾನ್ ಶೇಖ್ ಆಗಲಿ ಹಿಂದೆ ಸರಿಯಲಿಲ್ಲ. ಸಹಜವಾಗಿಯೇ ಮುಲ್ಲಾಗಳು ಹಾಗೂ ಮೌಲ್ವಿಗಳಿಂದ ಅವರಿಗೆ ಪ್ರತಿರೋಧ ಎದುರಾಯಿತು.

1890ರಲ್ಲಿ ಜ್ಯೋತಿಬಾ ತೀರಿಕೊಂಡರೆ, 1897ರಲ್ಲಿ ಸಾವಿತ್ರಿಬಾಯಿ ತೀರಿಕೊಂಡರು. ಮುಂದೆ 1930ರ ನಂತರವೇ ಜನ ಅಕ್ಷರಕ್ಕಾಗಿ ಹೋರಾಟಮಾಡಿದ್ದ ಈ ದಂಪತಿಯನ್ನ ಕುರಿತು ಮಾತನಾಡಲು, ಬರೆಯಲು ಆರಂಭಿಸಿದರು. ಅವರ ಜೊತೆಯಲ್ಲಿಯೇ ಜೀವಿಸಿದ್ದ, ಅವರ ಹೋರಾಟದುದ್ದಕ್ಕೂ ಕೈ ಜೋಡಿಸಿದ್ದ ಫಾತಿಮಾ ಶೇಖ್ ಏನಾದರು, ಎಲ್ಲಿ ಹೋದರು, ವಿವಾಹವಾದರೇ, ಇಲ್ಲವೇ? ಈ ಯಾವ ವಿಷಯಗಳೂ ಸಹ ಇಂದು ಲಭ್ಯವಿಲ್ಲ.

ಫಾತಿಮಾ ಶೇಖ್ ಪ್ರಸ್ತಾಪ ಬರುವುದು ಸಾವಿತ್ರಿಬಾಯಿ ಅನಾರೋಗ್ಯದ ಕಾರಣ ತನ್ನ ತವರಿಗೆ ಹೋಗಿ ಗಂಡನಿಗೆ ಬರೆದ ಪತ್ರಗಳಲ್ಲಿ ಮಾತ್ರ. ತನ್ನ ಗೈರು ಹಾಜರಿಯಲ್ಲಿ ಶಾಲೆಗಳನ್ನು ನಡೆಸುವ ಕಾರ್ಯಭಾರದ ಬಗ್ಗೆ ಮಾತನಾಡುತ್ತಾರೆ. 1856ರಲ್ಲಿ ಬರೆದ ಮೊದಲ ಪತ್ರದಲ್ಲಿ ತನ್ನ ಅನಾರೋಗ್ಯದ ಕಾರಣ ತನ್ನ ಜೊತೆಗಾರ್ತಿ ಫಾತಿಮಾ ಶೇಖ್ ಅವರಿಗೆ ತೊಂದರೆಯಾಗಬಹುದು. ತಾನು ಆದಷ್ಟು ಬೇಗ ಹಿಂದಿರುಗುವೆ ಎಂಬ ಮಾತು ಬರುತ್ತದೆ.

ಚರಿತ್ರೆಯಲ್ಲಿ ದಾಖಲಾಗದ ಕಾರಣ ಇಂದು ಫಾತಿಮಾಶೇಖ್ ಅವರನ್ನು ಕುರಿತು ಮಾತನಾಡುವುದೆಂದರೆ ಗಾಢ ಕತ್ತಲಲ್ಲಿ ಒಂದು ಮಿಣುಕುದೀಪ ಉರಿಸಿದಂತೆ. ಈ ಅಸ್ಪಷ್ಟ ದಾರಿಯಲ್ಲಿ 'ಫಾತಿಮಾ ಶೇಖ್' ಅವರನ್ನು ಕುರಿತು ತೆಲುಗಿನಲ್ಲಿ ಬಂದಿರುವ ಕೃತಿಯನ್ನು ಕೋಲಾರದ ಕಾ.ಹು. ಚಾನ್ ಪಾಷ ಕನ್ನಡಕ್ಕೆ ಅನುವಾದಿಸಿದ್ದಾರೆ.

■ **ಅಮೃತಮತಿ**

## ಮಾತೇ ಮುತ್ತು

- ಬಾಳು ಕಹಿಯಾದರೂ ನೆನಪು ಕಹಿಯಲ್ಲ.
  —ಕಾವ್ಯಾನಂದ
- ಯಾವುದು ಜೀವಿಗಳ ಅತ್ಯಂತ ಹಿತಸಾಧನೆಗೆ ಸಹಕಾರಿಯಾಗುವುದೋ ಅದೇ ಧರ್ಮ ಎನಿಸಿಕೊಳ್ಳುತ್ತದೆ.
  —ವ್ಯಾಸ
- ಮರೆಯುವುದು ಮಾತ್ರ ಅಂದುಕೊಂಡಷ್ಟು ಸುಲಭವಲ್ಲ. ಜೀವಕ್ಕೆ ಬೇಡವಾದದ್ದು ತಾನಾಗಿಯೇ ಮರೆಯುತ್ತದೆ. ಬೇಕಾದದ್ದನ್ನು ಮರೆಯಲು ಯತ್ನಿಸಿದಂತೆಲ್ಲ ಮನಸ್ಸಿನಲ್ಲಿ ಅದು ದೊಡ್ಡದಾಗುತ್ತಾ ಪ್ರಾಣ ತಿನ್ನುತ್ತದೆ.
  —ಪಿ. ಲಂಕೇಶ್
- ಅದೃಷ್ಟವನ್ನು ನಂಬಿಕೊಂಡಿರಬೇಡಿ. ನಿಮ್ಮ ಪ್ರಾಮಾಣಿಕತೆಯನ್ನು ನಂಬಿಕೊಳ್ಳಿ.
  —ಪಿ. ಸೈರಸ್
- ನಾವು ಗಳಿಸಬಹುದಾದ ಬೇರೆ ಯಾವ ಸಮಾಧಾನವೂ ಪ್ರೀತಿಗೆ ಸರಿಸಮಾನವಾದುದಿಲ್ಲ.
  —ಶಿವರಾಮ ಕಾರಂತ
- ಪ್ರಣಯವು ಸೋಮಾರಿಯ ಉದ್ಯೋಗ, ಯೋಧನ ಕ್ಷಣಿಕ ವಿಲಾಸ, ಚಕ್ರವರ್ತಿಯ ಪತನ ಹೇತು.
  —ನೆಪೋಲಿಯನ್
- ಎಲ್ಲ ಸಮಸ್ಯೆಗಳಿಗೂ ಮೂಲಕಾರಣ ಮನುಷ್ಯ, ಎಲ್ಲ ಪರಿಹಾರೋಪಾಯಗಳ ಮುಖ್ಯ ಗುರಿಯೂ ಮನುಷ್ಯನೆ.
  —ತರಾಸು
- ಯಾವುದರಲ್ಲಿ ಸತ್ಯವಿಲ್ಲವೋ ಅದು ಧರ್ಮವೇ ಅಲ್ಲ.
  —ಮಹಾಭಾರತ
- ಶಾಂತನೂ–ಸುಶೀಲನೂ ಆದವನು ವಯಸ್ಸಿನ ಭಾರವನ್ನು ಕಾಣನು. ಹಾಗಿಲ್ಲದವನಿಗೆ ಯೌವನವೂ ಮುಪ್ಪೂ ಎರಡೂ ಒಂದೇ.
  —ಪ್ಲೇಟೊ